doc-389
T.P-2

(1)

R No KRNN 12 28-10-1974

ಸ್ವರ್ಣ ಮಹೋತ್ಸವ ನೆರವೇಸಿದ ಪತ್ರಿಕೆ

in ★ ★ ★ ★ ★

58 th Year ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper

Satyavadi Daily Mysore 4

– For Influential Publicity –

ಪ್ರಕಾಶಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರವ್ರತ ಎಂ. ಎಸ್. ಕೃಷ್ಣರಾವ್ [3 ಪೈಸೆ

ಜೀತಾಬಗೆಗೆ ಕರ್ನಾಟಕ ಸರ್ಕಾರದ ಗಮನ

ದೈವಭಕ್ತ ಕೋತಿ

ವಿಸಾರ್— ವಿಜಯದಶಮಿಯಂದು ಆರ್ಯಸಮಾಜದ ಅನುಯಾಯಿಗಳ ಸಭೆಯಲ್ಲಿ ಸ್ವಾಮಿ ವಿದ್ಯಾನಂದ ವಿಧೇಯರವರು ಶ್ರೀ ರಾಮ ಮತ್ತು ಅತನ ಸಹಾಯಿಗಳನ್ನು ಕುರಿತು ಒಂದೂವರೆ ಗಂಟೆ ಕಾಲ ಭಾಷಣ ಮಾಡುತ್ತಿದ್ದಾಗ ಒಂದು ಕೋತಿ ಬಂದು ಕುಳಿತು ಪೂರ್ತಿ ಕಾಲ ಭಾಷಣವನ್ನು ಪೂರ್ಣಗಮನದಿಂದ ಕೇಳುತ್ತಿದ್ದಿತು.

ಬಿಹಾರಿನಿಂದ ಇಬ್ಬರ ಗಡೀಪಾರು

ಪಾಟ್ನಾ— ಪ್ರಸ್ತುತ ಚಳವಳಿಗಾಗಿ ಶ್ರೀ ಜಯಪ್ರಕಾಶರ ಹತ್ತಿರ ಸಹಾಯಕರಾದ ಅಖಿಲ ಭಾರತ ಸರ್ವ ಸೇವಾಸಂಘದ ಕಾರ್ಯದರ್ಶಿ ಶ್ರೀ ಥಾಕುರದಾಸ್ ಮತ್ತು ಮಾಜಿ ಎಂ.ಪಿ. ಮತ್ತು ಉತ್ತರ ಪ್ರದೇಶದ ಎಸ್ಸೆಸ್ಪಿ ನಾಯಕಿ ಶ್ರೀಮತಿ ಸರಳಾ ಬಾರ್ಡೋಲಿಯನ್ನವರನ್ನು ಬೀಹಾರಿನಿಂದ ಗಡೀಪಾರು ಮಾಡಲಾಯಿತು – ಇನ್ನೂ 10 ಜನರ ಮೇಲೆ ಆಜ್ಞೆ ಸಿದ್ಧವಾಗಿದೆ.

ಮೇಳನಕ್ಕೆ ಅಡ್ಡಿಗೊಳಿಸಲು

ಪಾಟ್ನಾ– ಬೀಹಾರಿನಲ್ಲಿ ಯೋಜಿಸಲಾಗಿರುವ ನವೆಂಬರು 4 ರಂದರ ಸಾಮೂಹಿಕ ಮೇಳನವನ್ನು ತಡೆಗಟ್ಟಲು ಸರಕಾರ ಪುನರೇಚ್ಚರಿಕೆ ಕಾರ್ಯಗಳನ್ನು ಕೈಗೊಂಡಿದೆ.

ಪ್ರತಿರೂಪು ದಹನ

ಪಾಟ್ನಾ— ವಿಜಯದಶಮಿಯಂದು 20ಅಡಿ ಎತ್ತರದ, ಭ್ರಷ್ಟಾಚಾರ, ಕಾಳಸಂತೆ, ಏರಿಕೆ ಬೆಲೆ, ಬಡತನದ ಕುರುಹುಗಳ ಆಪಾದನೆಯ ಬೀಹಾರು ಮಂತ್ರಿ ಮಂಡಲದ ಪ್ರತಿರೂಪು ಸುಡಲ್ಪಟ್ಟಿತು

ಶಿವಸೇನೆಯ ಬೆಂಬಲ

ಬೊಂಬಾಯಿ— ಶಿವಸೇನೆ ನಾಯಕ ಶ್ರೀ ಥಾಕರ್ಸೆಯವರು, ತಾವು ಜಯಪ್ರಕಾಶರ ಚಳವಳಿಯನ್ನು ಬೆಂಬಲಿಸುವುದಾಗಿಯೂ ಅವಶ್ಯಕ ಬಿದ್ದರೆ ಮಹಾರಾಷ್ಟ್ರದಲ್ಲೂ ಚಳವಳ ಪ್ರಾರಂಭಿಸಲಾಗುವುದೆಂದೂ ಹೇಳಿರುವರು.

ಲಂಚಕೋರ ತಾಸಿಲ್ದಾರ

ಮಡಕೇರಿ— ಇಲ್ಲಿಯ ಒಬ್ಬ ತಾಸಿಲ್ದಾರರು ಶ್ರೀ ಗೋಪಾಲಕೃಷ್ಣ ಭಟ್ಟರೆಂಬುವರಿಂದ ರೂ. 100 ಲಂಚ ಪಡೆಯುತ್ತಿದ್ದಾಗ ಹಿಡಿಯಲ್ಪಟ್ಟರು.

Rugs, Sweaters & Kashmir Coats

ರಗ್ಸು, ಸ್ವೆಟರು, ಕಾಶ್ಮೀರ್ ಕೋಟುಗಳಿಗೆ

ಬ್ಯಾಂಕ್ ರೋಡ್ ಬಾಹುಸಾರ್

A Fair Price Shop in Actual Practice

ನವೆಂಬರು 4 ರ ಮೇಳನ ಎದುರಿಸಲು

ಪಾಟ್ನಾ–ಜಿಲ್ಲೆ ಮಾಧ್ಯೆ 1000 ಕೆಎಂ ದೂರವಿದ್ದರೂ, ಎಡಪಂಥೀಯ ಕಡೆಯ ಅಧಿಕಾರಿಗಳೂ, ಜಯಪ್ರಕಾಶರು ಯೋಜಿಸಿರುವ ನವೆಂಬರು 4 ರಂದರ ಪ್ರದರ್ಶನವನ್ನು ಸಾಧ್ಯತೆಯಿಂದ ಎದುರಿಸಲು ಏರ್ಪಾಡು ಮಾಡುತ್ತಿರುವರು – ಚಳವಳಿ ಸಹಾಯಾರ್ಥವಾಗಿ ಕಾಂಗ್ರೆಸ್ ಅಧ್ಯಕ್ಷೆ ಶ್ರೀ ಬರೂಆರು ಇಂದು ಪಾಟ್ನಾಕ್ಕೆ ಆಗಮಿಸಲಿರುವರು

●

ಶಾಸಕರು ಕರ್ತವ್ಯ ನೆರವೇರಿಸಬೇಕು

ಬಿಕಾನೀರ್— ವಿದ್ಯಾರ್ಥಿಗಳ ಮತ್ತು ಯುವಕರ ಮೇಳನದಲ್ಲಿ ಭಾಷಣಮಾಡುತ್ತಾ ಶ್ರೀ ಜಯಪ್ರಕಾಶನಾರಾಯಣರು– ಜನರು ಶಾಸನಸಭೆಗಳಲ್ಲಿ ತಮ್ಮ ಪ್ರತಿನಿಧಿಗಳು ಸರಿಯಾಗಿ ಕೆಲಸಮಾಡಿ ತಮಗೆ ಅವಶ್ಯಕವಾದ ಸೌಕರ್ಯ ಒದಗಿಸುತ್ತಿದ್ದಾರೆಯೇ ಎಂಬ ಬಗ್ಗೆ ಎಚ್ಚರಿಕೆಯಿಂದಿರಬೇಕು, ಎಂದು ಹೇಳಿದರು.

ಬೆಲೆ ಇಳಿಕ !

ಇಂಡೋರು— ದಾಸ್ತಾನುಗಾರರ ಮತ್ತು ಕಳ್ಳಸಾಗಾಣಿಕೆಗಾರರ ಬಂಧನದಿಂದ ಮಧ್ಯಪ್ರದೇಶದಲ್ಲಿ ಅವಶ್ಯ ಪದಾರ್ಥಗಳ ಬೆಲೆ ಶೇಕಡ 25 ರಿಂದ 30 ರವರೆಗೆ ಇಳಿದಿದೆ !

ಆಲೂಗೆಡ್ಡೆ !

ನವದೆಹಲಿ— ಪಿನಕ್ಕೊಂದು ಆಲೂಗೆಡ್ಡೆ ಸೇವನೆ, ಡಾಕ್ಟರವ್ವನ್ನೂ ಹಶುವನ್ನೂ ದೂರವಿಡುವುದು, ಎಂದು 1980 ರ ಘೋಷಣೆಯಾಗುವುದಂತೆ !

★

ನ್ಯೂಸ್‌ಪ್ರಿಂಟ್

ಕೊಚ್ಚಿ– ರಷ್ಯಾ ಹೊಡಗು "ಮಾರಿಟ್ ರಾಜೆ" ಈ ರೀತಿಗೆ 23000 ಟನ್ ನ್ಯೂಸ್‌ಪ್ರಿಂಟ್ ತಂದಿತು.

ಮಂತ್ರಿ ಮಂಡಲ

ಬೆಂಗಳೂರು— ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್‌ರವರು ತಮ್ಮ ಮಂತ್ರಿ ಮಂಡಲಕ್ಕೆ ಶ್ರೀ ಮಹಮದ್ದಾಲಿಯವರನ್ನ ಕ್ಯಾಬಿನೆಟ್ ದರ್ಜೆ ಮಂತ್ರಿಗಳನ್ನಾಗಿ ಸೇರಿಸಿಕೊಂಡರು – ಸ್ವೇಟ್ ಮಂತ್ರಿಗಳಾಗಿದ್ದ ಶ್ರೀಮತಿ ಈವಾ ವಾಜ್‌ರನ್ನು ಕ್ಯಾಬಿನೆಟ್ ದರ್ಜೆ ಮಂತ್ರಿಯಾಗಿ ವರ್ಗಾಯಿಸಲಾಯಿತು – ಹೊಸದಾಗಿ, ಶ್ರೀಮತಿ ಮನೋರಮಾ ವಕಾಧ್ವರಾಜ್, ಶ್ರೀಗಳಾದ ಸಂ ಭಾ ಸ್ ಆಸ್ಕೂರೆ, ಕೆ. ಶ್ರೀರಾಮುಲು, ಆರ್. ಗುಂಡೂರಾವ್, ಶ್ರೀ ವೀರಪ್ಪ ಮಾಯ್ಲೆ, ಈ ೫ ಮಂದಿಯನ್ನು ಸ್ವೇಟ್ ಮಂತ್ರಿಗಳನ್ನಾಗಿ ಸೇರಿಸಿಕೊಂಡರು – ಮಂತ್ರಿಮಂಡಲದಿಂದ ಯಾರನ್ನೂ ತೆಗೆದುಹಾಕಿಲ್ಲ.

★

ಕಾನ್ವೋಕೇಷನ್ ಉಡುಪು

ಧಾರವಾಡ— ಕರ್ನಾಟಕ ವಿಶ್ವವಿದ್ಯಾನಿಲಯದ ಸೆನೇಟಿನಲ್ಲಿ, ಡಿಗ್ರಿ ಮತ್ತು ಡಿಪ್ಲೋಮಾ ಪಡೆಯುವವರು ಸಾಂಪ್ರದಾಯಿಕ ಕಪ್ಪು ಗೌನುಗಳನ್ನು ಧರಿಸುವುದನ್ನು ರದ್ದುಪಡಿಸಿ, ಬಿಳೀ ಉಡುಪು ಧರಿಸುವ ನಿರ್ಣಯವು ಮಂಜೂರಾಯಿತು.

ಜೀತಾ ಪದ್ಧತಿ

ಬೆಂಗಳೂರು— ರಾಜ್ಯದ ಕೆಲವು ಜಿಲ್ಲೆಗಳಲ್ಲಿರುವ ಜೀತಾ ಪದ್ಧತಿ ಬಗ್ಗೆ ವೈಜ್ಞಾನಿಕ ವ್ಯಾಸಂಗ ನಡೆಸಲು ಸರಕಾರ ಯೋಜಿಸಿದೆ.

★ ಬೊಂಬಾಯಿ— 88 ದಿನಗಳಿಂದ ನಡೆಯುತ್ತಿದ್ದ ಏರ್ ಇಂಡಿಯಾ ಚಾಲಕರ ಮುಷ್ಕರ ನಿಂತಿತು.

★ ಹೈದರಾಬಾದು– ಕಿಲಿವಾಲಸ ಗ್ರಾಮದಲ್ಲಾದ ಹರಿಜನ–ಸವರ್ಣ ಹಿಂದೂಗಳ ಘರ್ಷಣೆಯಲ್ಲಿ, ಗ್ರಾಮ ಮುನ್ಸೀಫ್ ಸೇರಿ 4 ಮಂದಿ ಸತ್ತರು.

ಶುಟ್ಟೇಭತ್ತದ ಬದಲು ಹಸು ಕೊಡಿ

ಬೊಂಬಾಯಿ— ಹಣಹುಬ್ಬರ ತಡೆಗಟ್ಟಲು, ಶುಟ್ಟೇ ಭತ್ತ ನಿಲ್ಲಿಸಿ, ಅದರ ಬದಲು ಪ್ರತಿಸಂಸಾರಕ್ಕೂ ಎರಡೆರಡು ಹಸುಗಳನ್ನು ಕೊಡತೆಂದು ಕೈಗಾರಿಕೋದ್ಯಮಿ ಶ್ರೀ ಅತವಿಂದ ಮುಫ್ತಾಲ್‌ರವರು ಇನ್ನ ಪಾಲನಾ ಮತ್ತು ಕ್ಷೀರಕ್ಷೇತ್ರ ಅಭಿವೃದ್ಧಿ ಕಾರ್ಯಕ್ರಮವನ್ನು ಉದ್ಘಾಟಿಸುತ್ತಾ ಹೇಳಿದರು.

ಹಿಟ್ಲರ್ ಸಸ್ಯಾಹಾರಿಯಾಗಿದ್ದನು

ಹಿಟ್ಲರ್ ಯೌವನಾವಸ್ಥೆಯಲ್ಲಿ ಸಸ್ಯಾಹಾರಿಯಾಗಿದ್ದನು ಮತ್ತು ಪಿತ್ಯವನ್ನು ಸೇವಿಸುತ್ತಿರಲಿಲ್ಲವೆಂದು ಅಂರ್ಡ ಹೇಲಿ ಟಿಲಿಗ್ರಾಫ್ ಪತ್ರಿಕೆಯಲ್ಲಿ (ಉಳಿದ ಪ 3)

ಕರ್ನಾಟಕ ಲೋಕೋಪಯೋಗಿ ಇಲಾಖೆ ಕೆ. ಆರ್. ಸಾಗರ ವಿಭಾಗ

ಟೆಂಡರ್ ಪ್ರಕಟಣೆ

ನಂ. 6/74-75 ತಾ|| 30-9-1974

ಈ ಕೆಳಗೆ ಕಂಡ ಕೆಲಸಗಳಿಗಾಗಿ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ರಿಜಿಸ್ಟರ್ ಆಗಿರುವ 3 ಮತ್ತು ಮೇಲ್ಪಟ್ಟ ವರ್ಗದ ಕಂಟ್ರಾಕ್ಟರ್‌ಗಳಿಂದ ಲಕೋಟೆಯ ಮೇಲೆ ಕೆಲಸದ ಹೆಸರು ಬರೆದ ಮೊಹರಾದ ಶೇಕಡಾವಾರು ಟೆಂಡರ್‌ಗಳನ್ನು ದ್ವಿಪ್ರತಿಗಳಲ್ಲಿ, ವಿಶಾಯಕವಾದ ಫಾರಂಗಳಲ್ಲಿ 7 ನೇ ನವೆಂಬರ್ 1974 ರ ಮಧ್ಯಾಹ್ನ 4 ಗಂಟೆ ವರೆಗೆ ಆಹ್ವಾನಿಸಲಾಗಿದೆ.

2-11-1974 ರಿಂದ 6-11-1974 ರ ವರೆಗೆ (ಎರಡು ದಿನಗಳು ಸೇರಿ) ಸೆಟ್ ಒಂದಕ್ಕೆ ರೂ 5/- ಪ್ಲಸ್ ಮಾರಾಟ ತೆರಿಗೆಯನ್ನು ಪಾವತಿ ಮಾಡಿದಲ್ಲಿ ಕೆಲಸದ ಎಲ್ಲ ದಿನಗಳಲ್ಲಿ ಕಚೇರಿ ಕೆಲಸದ ವೇಳೆಗಳಲ್ಲಿ ಖಾಲಿ ಟೆಂಡರ್ ಫಾರಂಗಳನ್ನು ಕೊಡಲಾಗುವುದು. ಈ ಹಣವನ್ನು ವಾಪಸು ಮಾಡಲಾಗುವುದಿಲ್ಲ. ಈ ಕೆಳಗೆ ಸೂಚಿಸಿರುವಂತೆ ಇ. ಎಂ ಡಿ. ಯನ್ನು ಡಿವಾಜಿಟ್ ಮಾಡಿದ್ದಕ್ಕೆ ಖಜಾನೆಯ ಚಲನ್ ಟೆಂಡರ್‌ಗಳೊಡನೆ ಇರಬೇಕು. ಕೆಲಸ ಮುಗಿಸಲು ಕಾಲಾವಧಿ ಐದು ತಿಂಗಳುಗಳು. ಟೆಂಡರ್‌ಗಳನ್ನು ಅಂಗೀಕರಿಸಲು ತಕ್ಕ ಅಧಿಕಾರವುಳ್ಳ ಅಧಿಕಾರಿಯವರಿಗೆ ಯಾವ ಕಾರಣಗಳನ್ನು ಕೊಡದೆ ಯಾವುದೇ ಅಥವಾ ಎಲ್ಲ ಟೆಂಡರ್‌ಗಳನ್ನು ತಿರಸ್ಕರಿಸುವ ಹಕ್ಕು ಮೀಸಲಾಗಿದೆ. ಕೆಲಸದ ಎಲ್ಲ ದಿನಗಳಲ್ಲಿ ಕಚೇರಿ ಕೆಲಸದ ವೇಳೆಗಳಲ್ಲಿ ಕೆ. ಆರ್. ಸಾಗರದಲ್ಲಿರುವ, ಕೆ. ಆರ್. ಸಾಗರ ವಿಭಾಗದ, ಎಕ್ಸಿಕ್ಯುಟೀವ್ ಇಂಜನಿಯರ್‌ರವರ ಕಚೇರಿಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಬಹುದು. ಸಾಧ್ಯವಾದರೆ ಟೆಂಡರ್‌ಗಳನ್ನು ಅದೇ ದಿನ ಒಡೆಯಲಾಗುವುದು

ಕೆಲಸದ ಹೆಸರು : ಶ್ರೀರಂಗಪಟ್ಟಣ ತಾಲ್ಲೂಕಿನ, ವಡಿಯಾಂಡನಹಳ್ಳಿಯ ಹತ್ತಿರ ಎ. ಡಿ. ಎಸ್. ಕಾಲುವೆಯ 7/50 ರಲ್ಲಿ ಗಾಡಿ ಸೇತುವೆಯನ್ನು ನಿರ್ಮಾಣ ಮಾಡುವುದು ಅಂಡಾಜು ಮೊತ್ತ (ಟೆಂಡರ್‌ಗೆ ಇಟ್ಟಿರುವ ಕೆಲಸದ ಭಾಗ) : ರೂ. 31,673/-. ಅರ್ನೆಸ್ಟ್ ಹಣ ಠೇವಣಿ : ರೂ 792/-.

ಸಹಿ/- ಎಕ್ಸಿಕ್ಯುಟೀವ್ ಇಂಜನಿಯರ್.

Help The Gorakshana

— Humanitarian Propaganda Monthly—

Quality Printing Neat Binding

Lakshminarasimha Press

Sivarampet, Mysore 1

ವುಡ್‌ಲಾಂಡ್ 25 10 74 ರಿಂದ

ಅಮೋಘ 6 ನೇ ವಾರ

ಇಮ್ತಿಹಾನ್ ● Imtihan

★ ತನುಜ ★ ವಿನೋದ ಖನ್ನ ★ ಬಿಂದು

ಅಭಿನಯಿಸಿರುವ ಅಮೋಘ ಹಿಂದಿ ವರ್ಣರಂಜಿತ ಕಲಾಕೃತಿ

ನಿರ್ದೇಶನ – ಮುದನ್ ಸಿಂಹ ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್

ದಿನ ೫ ಪ್ರದರ್ಶನಗಳು

ಅಪೆರಾ 25 10 74 ರಿಂದ

ಟಿ. ಆರ್. ರಾಜಕುಮಾರಿ, ಕಂಜನ್, ಎಸ್. ಎಸ್. ಕೃಷ್ಣನ್,

ಟಿ. ಎ. ಮಧುರಂ ಅಭಿನಯಿಸಿರುವ ಅಮೋಘ ತಮಿಳು ಚಿತ್ರ

ಚಂದ್ರಲೇಖ

ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Contribute Liberally

to the National Defence Fund

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamaraja puram Mysore